ವಿಚಾರ ಲಹರಿ

# ನಮ್ಮ ಭಾರತ

ಕೆಲವು ರಾಜ್ಯಗಳ ಪಠ್ಯಪುಸ್ತಕಗಳಲ್ಲಿ ಭಾರತದ ಭೂಪಟ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. ಅದನ್ನು ರಾಷ್ಟ್ರವ್ಯಾಪಿ ಬೋಧಿಸಲ್ಪಡಬೇಕೆಂಬ ಚಿಂತನೆ ನಡೆಯುತ್ತಿದೆ. ವಿಶ್ವವು ಒಂದೇ ರಾಷ್ಟ್ರವಾಗಿದ್ದರೆ, ಅಲ್ಲಿ ಒಂದೇ ಧರ್ಮವಿದ್ದರೆ, ಮನುಷ್ಯರೆಲ್ಲರೂ ಒಂದೇ ಬಣ್ಣದವರಾಗಿದ್ದರೆ ನಿಜಾರ್ಥದಲ್ಲಿ ನಾವೆಲ್ಲರೂ ವಿಶ್ವಮಾನವರಾಗುತ್ತಿದ್ದೆವು! ಇದೊಂದು wishful thinking ಅನ್ನಿಸಬಹುದು. ಒಂದು ಕಾಲದಲ್ಲಿ ಅಫ್ಘಾನಿಸ್ತಾನವೂ ಭಾರತದ ಗಡಿಯೊಳಗಿದ್ದದ್ದು ನಿಜ. ಆದರೆ ಇತಿಹಾಸವನ್ನು ಮರೆತು ವರ್ತಮಾನವನ್ನು ಕಟ್ಟಲಾದೀತೆ? ಹಾಗಿದ್ದವರು ಹೀಗಾದದ್ದು ಹೇಗೆ? ಎಂಬುದನ್ನು ತಿಳಿಯುವುದು ಅತ್ಯವಶ್ಯಕ.

ಕ್ರಿ.ಪೂ. 6 ನೇ ಶತಮಾನದಲ್ಲಿಯೆ ಇರಾನಿನ ಸಾಮ್ರಾಟನೊಬ್ಬ ಸಿಂಧೂನದಿಯ ಮುಖಜಭೂಮಿಯೆನಿಸಿದ್ದ ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯಗಳನ್ನು ಕಬಳಿಸಿಬಿಟ್ಟಿದ್ದ. 4ನೇ ಶತಮಾನದಲ್ಲಿ ಅಲೆಕ್ಸಾಂಡರ್ ದಿಗ್ವಿಜಯಕ್ಕಾಗಿ ಮೆಸಡೋನಿಯಾದಿಂದ ಹೊರಟ. ತಕ್ಷಶಿಲೆಯ ರಾಜನಾಗಿದ್ದ ಅಂಬಿ ಅಲೆಕ್ಸಾಂಡರ್ ಸಿಂಧೂನದಿಯನ್ನು ದಾಟಲು ನೆರವು ನೀಡುತ್ತಾನೆ. ಪರಾಕ್ರಮಿಯಾಗಿದ್ದ ಪುರು ಅವನೆದುರು ಪ್ರಾಣವನ್ನೆ ಪಣವಾಗಿಟ್ಟು ಯುದ್ಧ ಮಾಡಿದರೂ ಸೋತ ಬಳಿಕ ತನ್ನ ತಾಯ್ನಾಡಿನ ವಿರುದ್ಧವೇ ಹೋರಾಡುತ್ತಾ ಅವನ ಮುಂದಿನ ವಿಜಯಗಳಿಗೆ ನೆರವಾಗುತ್ತಾನೆ. ಚಂದ್ರಗುಪ್ತನ ಕಾಲದಲ್ಲಿ ಹಿಂದೂಕುಶ್ ಮತ್ತು ಕಾಬೂಲ್ ಭಾರತದಲ್ಲಿದ್ದವು. ಅಶೋಕನ ಮರಣಾನಂತರ ಭಾರತ ಮತ್ತೆ ಅಜಾಗರೂಕವಾಯಿತು. ಅನೇಕ ಸಂಸ್ಥಾನಗಳು ಸ್ವಾತಂತ್ರ್ಯ ಘೋಷಿಸಿಕೊಂಡವು. ಆಕ್ರಮಣಗಳ ಸರಣಿಯೇ ಏರ್ಪಟ್ಟಿತು. ವಿದೇಶೀಯರಾದ ಗ್ರೀಕರು ನೂರು ವರ್ಷ, ಶಕರು ಇನ್ನೂರು ವರ್ಷಗಳು ಆಳಿದರು. ಯವನರು ಮಗಧ ಸಾಮ್ರಾಜ್ಯದ ಕೇಂದ್ರವಾಗಿದ್ದ ಪಾಟಲೀಪುತ್ರಕ್ಕೆ ಲಗ್ಗೆ ಇಟ್ಟಾಗ ಪಕ್ಕದ ಕಳಿಂಗರಾಗಲೀ, ಆಂಧ್ರದ ಸಾತವಾಹನರಾಗಲೀ ತಲೆಕೆಡಿಸಿಕೊಂಡಿರಲಿಲ್ಲ. ಕಾರಣ ಬೌದ್ಧ, ಜೈನ ಮತ್ತು ಬ್ರಾಹ್ಮಣ ರಾಜರುಗಳ ನಡುವೆ ನಿರಂತರ ಸಂಘರ್ಷವೇರ್ಪಟ್ಟು ದೇಶವು ದುರ್ಬಲಗೊಂಡಿತ್ತು.

ಆ ನಂತರ ಸಾಮ್ರಾಜ್ಯ ಸ್ಥಾಪನೆಗೆ ಬುನಾದಿಯಾದದ್ದು ಮುಸ್ಲಿಮರ ದಾಳಿಯೆ. ತೈಮೂರನ ಹಿಡಿ ಮಂದಿ ಸೈನ್ಯದ ಖಡ್ಗಕ್ಕೆ ಒಂದು ಲಕ್ಷ ಸೆರೆಯಾಳುಗಳು ತಲೆಯೊಡ್ಡಿದರು. ಭಕ್ತಿಯಾರ್ ಕೇವಲ 18 ಕುದುರೆಯಾಳುಗಳೊಂದಿಗೆ ಬಿಹಾರ ಮತ್ತು ಬಂಗಾಲ ಪ್ರಾಂತ್ಯಗಳನ್ನು ವಶಪಡಿಸಿಕೊಂಡ. ನಂತರ ಐರೋಪ್ಯ ಸಮುದಾಯಗಳು ವ್ಯಾಪಾರಕ್ಕೆಂದು ಬಂದು ನೆಲೆ ನಿಂತವು. ಆಂಗ್ಲರು ಪಾರಮ್ಯ ಮೆರೆದರು. 1857ರ ಸಿಪಾಯಿದಂಗೆಯಲ್ಲಿಯೂ ಸಂಘಟನೆಯ, ದೇಶಾಭಿಮಾನದ ಕೊರತೆಯಿಂದಲೇ ಕ್ರಾಂತಿ ವಿಫಲವಾಯಿತು. ಭಾರತ ಯಾಕೆ ಸತತವಾಗಿ ಸೋಲುತ್ತಲೇ ಹೋಯಿತು ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ. ಆದರೂ ಇತಿಹಾಸಕಾರ ಭಗವತ್ ಶರಣ ಉಪಾಧ್ಯಾಯರು ತಮ್ಮ 'ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ' ಎಂಬ ಗ್ರಂಥದಲ್ಲಿ ಹಿಡಿದಿಟ್ಟಿರುವ ಕಾರಣಗಳ ಸಂಕ್ಷಿಪ್ತ ರೂಪ ಹೀಗಿದೆ.

'ಭಾರತದ ಸಾಮಾಜಿಕ ಸಂಘಟನೆಯ ಸ್ವರೂಪವೇ ಭಾರತದ ಸೋಲಿಗೆ ಅತ್ಯಂತ ಮಹತ್ವಪೂರ್ಣವಾದ ಕಾರಣವಾಗಿದೆ. ಇಲ್ಲಿಯ ವ್ಯಕ್ತಿಗಳಾಗಲೀ, ಸಮುದಾಯಗಳಾಗಲೀ ತಮ್ಮ ಹಿತಾಸಕ್ತಿಗಳ ಬಗ್ಗೆ ತಾವೇ ಎಂದೂ ಸ್ವತಂತ್ರವಾಗಿ ಚಿಂತಿಸಿಯೇ ಇಲ್ಲ. ಇವರಿಗಾಗಿ ಬೇರೆ ಯಾರೋ ಚಿಂತಿಸುತ್ತಾ ಬಂದಿದ್ದಾರೆ. ಇಲ್ಲಿನ ವರ್ಣ ವ್ಯವಸ್ಥೆ ನಾಡಿನ ನೈತಿಕ ಜೀವನದಲ್ಲಿ ಎಲ್ಲ ದೌರ್ಬಲ್ಯಗಳನ್ನು ತುಂಬಿಬಿಟ್ಟಿದೆ. ಸಮೂಹಗಳ ನಡುವೆ, ವ್ಯಕ್ತಿ-ವ್ಯಕ್ತಿಗಳ ನಡುವೆ ಅದು ಮೇಲು–ಕೀಳು ಭಾವನೆಗಳನ್ನು ಬೆಳೆಸಿ ಜನರ ನಡುವೆ ದ್ವೇಷ, ತಿರಸ್ಕಾರ ಮತ್ತು ಅವಹೇಳನಗಳನ್ನು ತಂದೊಡ್ಡಿದೆ. ವ್ಯಕ್ತಿ ಗೌರವ ದೊರೆಯುವುದು ಅವನ ಗುಣಗಳಿಂದಾಗಿಯೆ ಹೊರತು ಜಾತಿಯಿಂದಲ್ಲವೆಂದು ನೀತಿಗ್ರಂಥಗಳಲ್ಲಿ ಹೇಳಲಾಗಿದ್ದರೂ ವಾಸ್ತವವಾಗಿ ಹಾಗೆ ಎಂದೂ ಆಗಿಯೇ ಇಲ್ಲ. ತನ್ನ ವರ್ಣ ಮತ್ತು ಹಣಕಾಸಿನ ಸ್ಥಾನದಿಂದಾಗಿಯೆ ವ್ಯಕ್ತಿ ಆದರ ಅಥವಾ ಅನಾದರಕ್ಕೆ ಪಾತ್ರವಾಗುತ್ತಾ ಬಂದಿದ್ದಾನೆ. ವೈಯಕ್ತಿಕ ಕೀಳು ಸ್ಥಿತಿಗಳಿಗೆ ಪೂರ್ವ ಜನ್ಮದ ಕರ್ಮಗಳೇ ಕಾರಣವೆಂದು ಶಾಸ್ತ್ರಕಾರರು ಮತ್ತೆ ಮತ್ತೆ ಅವನ ಮೇಲೆ ಅಚ್ಚೊತ್ತುತ್ತಾ ಬಂದಿದ್ದಾರೆ. ಇದರಿಂದಾಗಿ ತನ್ನ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ವ್ಯಕ್ತಿಯಾಗಲೀ, ಸಮೂಹವಾಗಲೀ ಪ್ರಯತ್ನವನ್ನೇ ಪಡಲಿಲ್ಲ. – ಯಾವ ಸಮಾಜದಲ್ಲಿ ವ್ಯಕ್ತಿ–ವ್ಯಕ್ತಿಗಳ ನಡುವೆ ಜಾತಿ– ಜಾತಿಗಳ ನಡುವೆ ಮೇಲು– ಕೀಳು ಎಂಬ ಭಾವನೆ ಇರುತ್ತದೆಯೊ, ಒಂದು ನಿರ್ದಿಷ್ಟ ವರ್ಗಕ್ಕೆ ಊರಿನ ಒಳಗಡೆ ವಾಸಮಾಡಲು ಬಿಡುವುದಿಲ್ಲವೋ, ಅಂಥ ಸಮಾಜ ಸಾಮೂಹಿಕವಾಗಿ, ಸಾಮಾಜಿಕವಾಗಿ ಏಳಿಗೆಯನ್ನು ಸಾಧಿಸುತ್ತದೆ ಎಂದು ನಿರೀಕ್ಷಿಸುವುದಾದರೂ ಹೇಗೆ? ಹೀಗೆ ಒಂದು ಬೃಹತ್ ಸಮುದಾಯವನ್ನು ಅಂತ್ಯಜರಾಗಿಸಿಬಿಡುವುದರಿಂದ ಸಮಾಜದ ಶಕ್ತಿ ಅಷ್ಟರಮಟ್ಟಿಗೆ ಕ್ಷಯವಾಗಿಬಿಡುತ್ತದೆ.– ಯುದ್ಧ ಮಾಡುವುದು ಕೇವಲ ಕ್ಷತ್ರಿಯರ ಕರ್ತವ್ಯವೆಂಬ ಭಾವನೆ ಬಲವಾಗಿ ಬೇರೂರಿಬಿಟ್ಟಿರುವುದರಿಂದ ಉಳಿದ ಮೂರು ವರ್ಣಗಳು ಮತ್ತು ಅಸ್ಪೃಶ್ಯ ವರ್ಗ ಯುದ್ಧದ ದೃಷ್ಟಿಯಿಂದ ನಿರುಪಯುಕ್ತವಾಗಿ ಪರಿಣಮಿಸಿದವು.'

ವರ್ಣವ್ಯವಸ್ಥೆಯು ನಿರ್ದೇಶಿಸುವಂತೆ ಮದುವೆಗಳ ಬಂಧನ ತುಂಬಾ ಸಂಕುಚಿತವಾಗಿರುವುದರಿಂದ ಫ್ರೆಂಚ್ ಮಹಾಕ್ರಾಂತಿಯಲ್ಲಾದಂತೆ ಕ್ಷೌರಿಕರು, ದರ್ಜಿಗಳು, ಚಮ್ಮಾರರು, ಹಕ್ಕಿಪಿಕ್ಕಿಗಳ ನಡುವಿನಿಂದ ಸೇನಾಪತಿಗಳು ಹುಟ್ಟಿಬರಲಿಲ್ಲ. ಬ್ರಿಟಿಷರು ಇಲ್ಲಿ ಹರಿದು ಹಂಚಿಹೋಗಿದ್ದ 564 ಸಂಸ್ಥಾನಗಳು ಒಟ್ಟುಗೂಡಲು ಕಾರಣೀಭೂತರಾದರು, ಆದ್ದರಿಂದಲೇ ಇಂದಿನ ಭಾರತದ ಭೂಪಟ ಹೀಗಿದೆ. ಇತಿಹಾಸದ ಕಹಿ ಸತ್ಯಗಳನ್ನೂ ನಮ್ಮ ಮಕ್ಕಳು ಅರಿಯುವ ಅಗತ್ಯವಿದೆ.

■ ಮೂಚಿ

## ಮಾತೇ ಮುತ್ತು

★ ಕಳವು ಮಾಡಿ ಒಡಲ ಹೊರೆಯಲು ಬೇಡ
ಕುಳ್ಳಿರ್ತ ಸಭೆಯೊಳಗೆ ಕುಟಿಲ ನಡೆಸಲು ಬೇಡ
ಒಳ್ಳೆಯವ ನಾನೆಂದು ಬಲು ಹೆಮ್ಮೆಲಿರಬೇಡ
ಬಾಳ್ವೆ ಸ್ಥಿರವೆಂದು ನೀ ನಂಬಿ ಕೆಡಬೇಡ.

-ಕನಕದಾಸ

★ ನಿರಾಶಾವಾದಿಯಾದವನು ಎಲ್ಲ ಅವಕಾಶಗಳಲ್ಲೂ ಕಷ್ಟಗಳನ್ನೇ ಹುಡುಕುತ್ತಾನೆ. ಆಶಾವಾದಿಯಾದವನು ಎಲ್ಲ ಕಷ್ಟಗಳಲ್ಲೂ ಅವಕಾಶಗಳನ್ನೇ ಹುಡುಕುತ್ತಾನೆ.

-ವಿನ್‌ಸ್ಟನ್ ಚರ್ಚಿಲ್

★ ಪ್ರತಿಫಲವನ್ನು ಅಪೇಕ್ಷಿಸದೆ, ಪರಿಪೂರ್ಣ ನಿಸ್ವಾರ್ಥಿಯಾಗಿ ಕೆಲಸ ಮಾಡುವವನು ಈ ಜಗತ್ತಿನಲ್ಲಿ ಯಶಸ್ವೀ ವ್ಯಕ್ತಿ.
ನಿಸ್ವಾರ್ಥಿಯಾಗಿರುವುದೇ ನೈಜ ಯಶಸ್ಸು ಮತ್ತು ಸಂತೋಷದ ರಹಸ್ಯ.

-ಸ್ವಾಮಿ ವಿವೇಕಾನಂದ

★ ಕಲಿಕೆ ಸೃಜನಶೀಲತೆಯನ್ನು ಉತ್ತೇಜಿಸುತ್ತದೆ. ಸೃಜನಶೀಲತೆ ಆಲೋಚನೆಗೆ ದಾರಿ ಮಾಡಿಕೊಡುತ್ತದೆ. ಆಲೋಚನೆ ಜ್ಞಾನವನ್ನು ವಿಸ್ತರಿಸುತ್ತದೆ. ಜ್ಞಾನ ನಿಮ್ಮನ್ನು ಶ್ರೇಷ್ಠರನ್ನಾಗಿಸುತ್ತದೆ.

-ಎ.ಪಿ.ಜೆ. ಅಬ್ದುಲ್ ಕಲಾಂ

★ ತನ್ನ ಹೆಂಡತಿ ಅಪ್ಸರೆ ಆಗಿರಬೇಕೆಂದು ಬಯಸುವಾತ, ಆಕೆಗಾಗಿ ಮೊದಲು ಸ್ವರ್ಗವೊಂದನ್ನು ಸೃಷ್ಟಿಸಿರಬೇಕು.

-ಇಂಗ್ಲಿಷ್ ಗಾದೆ

★ ನಿನ್ನ ವೈರಿಯೇ ಮನೆಬಾಗಿಲಿಗೆ ಬಂದರೂ ಸೌಜನ್ಯದಿಂದ ಸ್ವಾಗತಿಸು. ತನ್ನನ್ನು ಕಡಿಯಲು ಬಂದವನಿಗೂ ಮರ ನೆರಳನ್ನೇ ಕೊಡುತ್ತದೆ.

-ಮಹಾಭಾರತ

★ ನನ್ನ ತಪ್ಪುಗಳನ್ನು ನನಗೆ ಕಾಣಿಕೆಯಾಗಿ ಕಳುಹಿಸುವವನ ಮೇಲೆ ಅಲ್ಲಾಹನ ದಯೆ ಇರಲಿ.

-ಖಲೀಫಾ ಉಮರ್

★ ಊಟದ ಹಸಿವನ್ನು ಸುಲಭವಾಗಿ ನಿವಾರಿಸಬಹುದು, ಆದರೆ ಪ್ರೀತಿಯ ಹಸಿವನ್ನು ನಿವಾರಿಸುವುದು ತುಂಬ ಕಷ್ಟ.

-ಮದರ್ ಥೆರೇಸಾ

★ ಎದರುಗಳ ಕಡಲುಗಳನೀಸಿ ಬರುವೆವು,
ಘೋರ
ನೈರಾಶ್ಯದಗ್ನಿಮುಖದಲ್ಲು ಕೂಡಾ
ಹೊಕ್ಕು ಹೊರಡುವೆವೆಲ್ಲ ತೊಡಕುಗಳ,
ಒಡಕುಗಳ
ಬಿಡಿಸಿ, ಇಡಿಗೊಳಿಸಿ ಕಟ್ಟುವೆವು ನಾಡ.

-ಗೋಪಾಲಕೃಷ್ಣ ಅಡಿಗ